

ಕ್ಯಾರೇ ಎನ್ನುವುದಿಲ್ಲ. ಒಮ್ಮೆಯಂತೂ ಒಬ್ಬ ಬೈಕಿನವನು ನಮ್ಮೆದುರಿಗೇ ಹಾವನ್ನು ಅಪ್ಪಚ್ಚಿ ಮಾಡಿ ಮುಂದೆ ಹೋದ. ಸಾಲದ್ದಕ್ಕೆ ವಾಪಸ್ಸು ಬಂದು ಮತ್ತೆ ಅದರ ಮೇಲೆ ಗಾಡಿ ಚಲಾಯಿಸಲು ನೋಡಿದ. ನಾವು ಅವನೊಡನೆ ಜಗಳಕ್ಕೆ ಬಿದ್ದೆವು. 'ಕಚ್ಚಿದರೆ ಹೋಗೋದು ನಮ್ಮ ಪ್ರಾಣ ಕಂಡ್ರಿ' ಎಂದು ಜೋರು ಮಾಡಿದ. ಡಾ. ಪ್ರಭಾಕರ್ ಅವನಿಗೆ ಹಾವಿನ ಮಹತ್ವವನ್ನು ಆ ಚಳಿಮಳೆಗಾಳಿಯಲ್ಲಿ ವಿವರಿಸಲು ಹೋಗಿ ಸೋತರು. ನಮ್ಮ ಉರಗ ಕಾಳಜಿಯೇ ಅವನಿಗೆ ವಿಚಿತ್ರವಾಗಿ ತೋರುತ್ತಿತ್ತು. ನಾವೆಲ್ಲಾ ಒಮ್ಮೆಗೇ ಎಗರಾಡಿ ಮುಗಿಬಿದ್ದ ಹೊಡೆತಕ್ಕೆ ಅವನು ಮತ್ತೆ ಗಾಂಚಾಲಿ ಮಾಡದೆ ತೆಪ್ಪಗೆ ಹೊರಟು ಹೋದ. ಅನ್ಯಾಯವಾಗಿ ಸತ್ತ ಆ ಸರ್ಪವನ್ನು ನೋಡಿ ವಿನಯ ಅಳುವುದೊಂದು ಬಾಕಿಯಿತ್ತು. ನಮಗೂ ಸಂಕಟವಾಗಿತ್ತು.

ಮತ್ತೆ ಅರ್ಧರಾತ್ರಿಯವರೆಗೂ ನಮ್ಮ ತಲಾಶು ಹೀಗೆ ಮುಂದುವರೆಯಿತು. ಉರಗಗಳಿಗೆ ಕೊಂಚವೂ ತೊಂದರೆಯಾಗದಂತೆ ಜಾಗ್ರತೆ ವಹಿಸುವುದರಲ್ಲಿ ನಮ್ಮ ವಿನಯ ಪಳಗಿದವನು. ಪ್ರತಿ ಹಾವಿನ ಗುಣ ಸ್ವಭಾವ ಬಲ್ಲ ಅವನು ಒಂದರ್ಥದಲ್ಲಿ ನಾಗಲೋಕದಲ್ಲೇ ಹುಟ್ಟಬೇಕಾತ್ತು. ತಪ್ಪಿ ಭೂಲೋಕದಲ್ಲಿ ಇಳಿದು ಬಿಟ್ಟಿದ್ದಾನೆ. ಇವನ ಸಂಗ ಮಾಡಿದ ಮೇಲೆ ನಾ ಕಂಡ ಅಪರೂಪದ ಹಾವುಗಳಿಗೆ ಲೆಕ್ಕವೇ ಇಲ್ಲ. ಅನೇಕ ನಿಶಾಚರ ಹಾವುಗಳು ಹಗಲೊತ್ತು ಕಾಣ ಸಿಗುವುದಿಲ್ಲವೆಂದೂ; ಅವುಗಳಿಗಾಗಿ ನಾವು ಭಂಡ ಧೈರ್ಯ ಮಾಡಿಯೇ ರಾತ್ರಿ ಫೋಟೋಗ್ರಫಿ ಮಾಡಬೇಕೆಂದು ಕಲಿಸಿದವನು ಅವನೇನೆ.

ಈ ಸರ್ಪ ಕುಲ ನಮ್ಮ ಪ್ರಕೃತಿ ಸೃಷ್ಟಿಸಿದ ವಿಶಿಷ್ಟ ಜೀವಜಾಲ. ಆದರೆ, ಇವುಗಳ ಬಗ್ಗೆ ನಮಗೆ ಸ್ಪಷ್ಟ ತಿಳಿವಳಿಕೆಗಿಂತ ಅದೇನೋ! ಘನಘೋರ ಭಯ ಅಮರಿಕೊಂಡಿದೆ. ನೋಡಿ ರೈತರು ಬೆಳೆಯುವ ಆಹಾರದ ದೊಡ್ಡ ಪಾಲನ್ನು ಇಲಿಗಳು ನಾಶ ಮಾಡುತ್ತವೆ. ಅದರಲ್ಲೂ ತೆನೆಭತ್ತ ಒಟ್ಟಿದ ಬಣವೆ ಜಾಗದಲ್ಲಿ ಹತ್ತಾರು ಬಿಲಗಳ ನೋಡಬಹುದು. ಒಂದೊಂದು ಬಿಲ ಅಗೆದರೂ ಸೇರಿಗಿಂತ ಹೆಚ್ಚು ಬಚ್ಚಿಟ್ಟ ಭತ್ತ ಸಿಗುತ್ತದೆ. ಅಕ್ರಮವಾಗಿ ರೈತನ ದಾಸ್ತಾನನ್ನು ಲೂಟಿ ಮಾಡಿ ಬಚ್ಚಿಡುವಲ್ಲಿ ಇಲಿ ಹೆಗ್ಗಣಗಳು ಎತ್ತಿದ ಕೈ. ಇಂತಹ ಕಡೆ ಹಾವುಗಳ ಇರುವಿಕೆಯ ಕೊರತೆ ಉಂಟಾದರೆ ಬೆಳೆದ ಬೆಳೆಯ ಬಹುಪಾಲು ಇಲಿಗಳ ವಶವಾಗುತ್ತದೆ. ಇಂತಹ ಬಿಲದೊಳಗೆ ನುಗ್ಗಿ ಇಲಿಗಳ ಕೆಡವಿ ಬೇಟೆಯಾಡುವ ದಮ್ಮು, ತಾಕತ್ತು ಇರುವುದು ಹಾವುಗಳಿಗೆ ಮಾತ್ರ.

ಹಾವಿನ ವಿಷದಲ್ಲಿರುವ ಪ್ರೋಟೀನ್ ಅಂಶಗಳನ್ನು ಬಳಸಿ ಜನರ ಜೀವ ಉಳಿಸುವ ಅನೇಕ ಔಷಧಗಳನ್ನು ತಯಾರಿಸಲಾಗುತ್ತಿದೆ. ಮನುಷ್ಯನ ಡಿಎನ್ಎ ಕಂಡು ಹಿಡಿಯಲು ಕೂಡ ಸರ್ಪದ ವಿಷ ಬೇಕಂತೆ. ಪಾರ್ಶ್ವವಾಯು, ಹೃದ್ರೋಗದಂಥ ಕಾಯಿಲೆಗಳಿಗೆ ಕೂಡ ಹಾವಿನ ವಿಷ ಉಪಯೋಗಿಸಿ ಮದ್ದು ತಯಾರಿಸಲಾಗುವುದಂತೆ. ಆದರೆ, ಈ ಸೂಕ್ಷ್ಮ